should do things like this ? Have they any respect for the Government ? What can we do if you give such reports ? ೧೫೩೭ ಲಕ್ಷ ಲಾಸ್ ಆಗಿದೆ. ಇದರ ಬಗ್ಗೆ ಹೇಳಿದರೆ ತಪ್ಪಾಗಿ ಸಿಟ್ಟು ಬರುತ್ತದೆ. ಇದಕ್ಕೆ ಏನು ಹೇಳಬೇಕು. ನೀವೇ ಹೇಳಿ.

ಶ್ರೀ ಸಿ. ವೀರಣ್ಣ.—ಅವರನ್ನು ಟ್ರಾನ್ಸ್‌ಫರ್ ಮಾಡಿದ ಕಾರಣಕ್ಕೆ ಮತ್ತು ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ ಕಾರಣಕ್ಕೆ ಫ್ಯಾಕ್ಟರಿ ನಷ್ಟ ಅನುಭವಿಸಿಲ್ಲವೆಂದು ನಾನು ಹೇಳುತ್ತೇನೆ.

ಆನೇಕಲ್ ತಾಲ್ಲೂಕಿಗೆ ವಿದ್ಯುತ್ ಸರಬರಾಜು

೧೫೩೩ (೬೬೭) ಶ್ರೀ ಎಂ. ಪಿ. ಕೇಶವಮೂರ್ತಿ (ಆನೇಕಲ್).—ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಆನೇಕಲ್ ತಾಲ್ಲೂಕಿನಲ್ಲಿ ೧೯೮೮-೮೯ ಹಾಗೂ ಈ ತಹಲ್‌ವರೆಗೆ ಎಷ್ಟು ಪಂಪು ಸೆಟ್ಟುಗಳಿಗೆ ವಿದ್ಯುತ್ ಸರಬರಾಜಿಗಾಗಿ ರೈತರಿಂದ ಅರ್ಜಿಗಳು ಬಂದಿವೆ ?

ಆ) ಈ ಅರ್ಜಿಗಳ ಪೈಕಿ ಎಷ್ಟು ಪ್ರಕರಣಗಳಲ್ಲಿ ವಿದ್ಯುತ್ ಒದಗಿಸಲಾಗಿದೆ ಮತ್ತು ಎಷ್ಟು ಪ್ರಕರಣಗಳಲ್ಲಿ ಇನ್ನೂ ವಿದ್ಯುತ್ ಒದಗಿಸಬೇಕಾಗಿದೆ?

ಇ) ಉಳಿದವುಗಳಿಗೆ ಎಂದು ವಿದ್ಯುತ್ ಒದಗಿಸಲಾಗುವುದು?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು).—

ಅ) ೧-೪-೧೯೮೮ ರಿಂದ ೨೦-೩-೧೯೮೯ರವರೆಗೆ ೫೭೮ ಅರ್ಜಿಗಳು ಮಂಡಳಿಯಲ್ಲಿ ನೋಂದಾಯಿಸಲ್ಪಟ್ಟಿವೆ.

ಆ) ಅರ್ಜಿಗಳ ಪೈಕಿ ೨೩೪ ಅರ್ಜಿದಾರರಿಗೆ ವಿದ್ಯುತ್ ಒದಗಿಸಲಾಗಿದೆ. ೨೦-೩-೧೯೮೯ರಲ್ಲಿ ಬಾಕಿ ಉಳಿದ ಅರ್ಜಿಗಳ ಸಂಖ್ಯೆ. ೩೪೪

ಇ) ಇವುಗಳಿಗೆ ಮುಂದಿನ ಸಾಲಿನಲ್ಲಿ ವಿದ್ಯುತ್ ಒದಗಿಸಲು ಪ್ರಯತ್ನಿಸಲಾಗುತ್ತದೆ.

ಶ್ರೀ ಎಂ. ಪಿ. ಕೇಶವಮೂರ್ತಿ.—ಸನ್ಮಾನ್ಯ ಸಭಾಧ್ಯಕ್ಷರೇ, ೧೯೮೮-೮೯ನೇ ವರ್ಷದಗುರಿಯು ಎಷ್ಟಿದೆ ? ಅದರಲ್ಲಿ ಸಾಧನೆ ಎಷ್ಟು ಮಾಡಿದ್ದಾರೆ ? ಈಗಾಗಲೇ ರೈತರು ಸಾವಿರಾರು ರೂಪಾಯಿಗಳ ಸಾಲಪತ್ರವನ್ನು ಮಾಡಿ ಕೊಳವೆಬಾವಿಗಳನ್ನು ತೋಡಿಸಿ, ವಿದ್ಯುತ್ ಇಲ್ಲದೆ ಬಹಳ ತೊಂದರೆಗೆ ಒಳಗಾಗಿದ್ದಾರೆ. ನಮ್ಮ ಆನೇಕಲ್ ತಾಲ್ಲೂಕು ಬಹಳ ಹಿಂದುಳಿದ ಪ್ರದೇಶವಾಗಿರುವುದರಿಂದ ಅದ್ಯತೆಯ ಮೇರೆಗೆ ಅದಷ್ಟು ಜಾಗ್ರತೆ ಉಳಿದಿರತಕ್ಕಂಥ ಕೊಳವೆಬಾವಿಗಳಿಗೆ ವಿದ್ಯುತ್‌ಚ್ಛಕ್ತಿಯನ್ನು ಕೊಡಿಸಬೇಕೆಂದು ತಮ್ಮ ಮೂಲಕ ಸರಕಾರವನ್ನು ಒತ್ತಾಯ ಪಡಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—೧೯೮೩ರಲ್ಲಿ ನಮ್ಮ ಸರಕಾರ ಅಧಿಕಾರಕ್ಕೆ ಬಂದಾಗ ಸುಮಾರು ೪೦ ಸಾವಿರ ಪಂಪ್‌ಸೆಟ್‌ಗಳಿಗೆ ಪ್ರತೀ ವರ್ಷವೂ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ ಎಂದು ಘೋಷಣೆ ಮಾಡಿ ಪ್ರತಿವರ್ಷವೂ ಕೂಡ ಟಾರ್ಗೆಟ್ ಮೀರಿ ಕೆಲಸ ಮಾಡಿದ್ದೇವೆ. ೪೧ ಸಾವಿರ ಪಂಪ್‌ಸೆಟ್‌ಗಳಿಗೆ ೧೯೮೭-೮೮ರಲ್ಲಿ ಸರ್ವಿಸನ್ ಕೊಟ್ಟಿದ್ದೇವೆ. ನಾವು ಏನು ಗುರಿಯನ್ನು ಇಟ್ಟುಕೊಂಡಿದ್ದೆವೋ ಅದಕ್ಕಿಂತ ಕಡಿಮೆ ಕೆಲಸವನ್ನು ನಾವ್ ಮಾಡಿಲ್ಲ. ಈಗ ಉಳಿದಿರತಕ್ಕಂಥ ೧೧೦ ಪಂಪ್‌ಸೆಟ್‌ಗಳ ಕೆಲಸ ವಿವಿಧ ಹಂತದಲ್ಲಿದೆ. ಹಿಳಿಳಿ ಅರ್ಜಿಗಳು ಬಾಕಿ ಇದ್ದರೂ ೧೯೬೬ ಪಂಪ್‌ಸೆಟ್‌ಗಳ ಕೆಲಸ ಸಂಪೂರ್ಣವಾಗಿ ಮುಗಿದಿದ್ದು ಅವುಗಳಿಗೆ ಸರ್ವಿಸ್ ಕೊಡಬೇಕಾಗಿದೆ. ನಮ್ಮ ಗುರಿ ಮೀರಿ ೧೦ ಪರ್‌ಸೆಂಟ್‌ನಷ್ಟು ಆದರೂ ಕೆಲಸ ಮಾಡುತ್ತೇವೆ ಎಂದು ಮಾನ್ಯ ಸದಸ್ಯರಿಗೆ ಆಶ್ವಾಸನೆಯನ್ನು ಕೊಡಬಯಸುತ್ತೇನೆ.

ವರಾಹಿ ಜಲವಿದ್ಯುತ್ ಯೋಜನೆಯಂ ಸಣ್ಣ ಅಣೆಕಟ್ಟು

೧೫೪೪(೬೪೧) ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ವರಾಹಿ ಜಲವಿದ್ಯುತ್ ಯೋಜನೆಯ ಮಿನಿ ಡ್ಯಾಂನ ಕೆಳಗೆ ಬಿರುಕು ಬಿಟ್ಟು ನೀರು ಅಧಿಕವಾಗಿ ಹೊರಹೋಗುತ್ತಿರುವ ವಿಚಾರ ನಿಜವೇ ?

ಆ) ಹಾಗಿದ್ದರೆ ನಿಗಮದವರು ನೀರಿನ ಈ ಸೋರುವಿಕೆಯನ್ನು ನಿಲ್ಲಿಸಲು ಕೈಗೊಂಡಿರುವ ಕ್ರಮಗಳೇನು ?

ಇ) ಅಲ್ಲಿ ಅಳವಡಿಸಿರುವ ಮಿನಿ ಜನರೇಟರ್‌ನಿಂದ ವಿದ್ಯುತ್ ಉತ್ಪತ್ತಿಯನ್ನು ಯಾವಾಗಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ಮಿನಿಡ್ಯಾಂ ಕೆಳಗೆ ಯಾವ ಬಿರುಕುಗಳೂ ಕಂಡು ಬಂದಿಲ್ಲ ಮತ್ತು ಈ ಕಾರಣದಿಂದ ನೀರು ಹೊರಹೋಗುತ್ತಿಲ್ಲ, ಆಣೆಕಟ್ಟೆಯ ಕಲ್ಲು ಕಟ್ಟಡದ ವ್ಯಾಪ್ತಿಕೆ (ಪರಮಿಯ ಬಿಲಿಟಿ)ಯು ನಿಗದಿತ ಪ್ರಮಾಣಕ್ಕಿಂತ ಸ್ವಲ್ಪ ಹೆಚ್ಚಾಗಿರುವುದರ ಪರಿಣಾಮಕ್ಕೆ ಅಲ್ಪ ಪ್ರಮಾಣದಲ್ಲಿ ನೀರು ಸೋರುತ್ತಿರುವುದು ಕಂಡು ಬಂದಿದೆ.

ಆ) ಕಲ್ಲು ಕಟ್ಟಡದ ವ್ಯಾಪ್ತತೆಯು ಹೆಚ್ಚಾಗಿರುವ ಸಂದರ್ಭದಲ್ಲಿ, ಅದನ್ನು ಕಡಿಮೆ ಮಾಡಲು ನೀರುಗಾರೆಯನ್ನು ತುಂಬುವ ಕ್ರಮವನ್ನು (ಗ್ರೌಟಿಂಗ್) ಕೈಗೊಂಡು ಬಹುಪಾಲು ಸೋರುವಿಕೆಯನ್ನು ಕಡಿಮೆಮಾಡಲಾಗಿದೆ.

ಇ) ಆಣೆಕಟ್ಟಿನ ಕೆಳಭಾಗದಲ್ಲಿ ನಿರ್ಮಿಸಲಾಗುತ್ತಿರುವ ಸಣ್ಣ ವಿದ್ಯುದಾಗಾರದಲ್ಲಿ ವಿದ್ಯುತ್ತನ್ನು (ಅಂದರೆ ಒಟ್ಟು ೯ ಮೆಗಾವ್ಯಾಟ್‌ಗಳಷ್ಟು) ೧೯೯೮ರಲ್ಲಿ ಉತ್ಪಾದಿಸಲಾಗುವುದು.

ಶ್ರೀ ಡಿ. ಜೆ. ಬಸವನಗೌಡ.—ಮಾನ್ಯ ಮಂತ್ರಿಗಳ ಉತ್ತರದಿಂದ ನನಗೆ ಸ್ವಲ್ಪ ಅನುಮಾನ ಬರುತ್ತದೆ. ಆಣೆಕಟ್ಟಿನಲ್ಲಿ ಸ್ವಲ್ಪ ನೀರು ಹೋಗುತ್ತಾ ಇದೆ ಅಂದರೆ ಏನು ? ಅಲ್ಲಿಗೆ ನಾವು ಸಾರ್ವಜನಿಕರಾಗಲೀ, ಶಾಸಕರಾಗಲೀ, ಪ್ರೊಹಿಬಿಟೆಡ್ ಏರಿಯಾ ಆದಕಾರಣ ಹೋಗುವಂತಿಲ್ಲ. ಈ ಬಗ್ಗೆ ಮಾರ್ಚ್ ೩ನೇ ತಾರೀಖಿನ ಉದಯವಾಣಿ ಪತ್ರಿಕೆಯಲ್ಲಿಯೂ ಪ್ರಕಟವಾಗಿದೆ. ವರಾಹಿ ಆಣೆಕಟ್ಟೆಗೆ ಮಾನ್ವಿಡ್ಯಾಮ್ ಮೆಯಿನ್ ರಿಸರ್ವಾಯರ್ ಆಗಿದೆ. ಅಲ್ಲಿ ಸುಮಾರು ೩೦೦ ಅಡಿ ಕೆಳಗಡೆ ಈಗಾಗಲೇ ನೀರು ಲೀಕ್ ಆಗಿ ಹೆಚ್ಚಿನ ಪ್ರಮಾಣದಲ್ಲಿ ನೀರು ಡ್ಯಾಮ್‌ನಿಂದ ಹೋಗುತ್ತಾ ಇದೆ. ಹೀಗೆ ಆದರೆ ಡ್ಯಾಮ್ ಒಡೆದು ಹೋಗತಕ್ಕಂಥ ಒಂದು ಪರಿಸ್ಥಿತಿಯೂ ಬರಬಹುದು ಎಂಬ ಶಂಕೆಯೂ ಇದೆ. ಮಾನ್ಯ ಸಚಿವರು ಇಲಾಖಾ ಅಧಿಕಾರಿಗಳ ವರದಿಯನ್ನು ನಂಬಿಕೊಂಡು ಉತ್ತರವನ್ನು ಕೊಡದೇ ಸ್ವತಃ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಬೇಕು. ಇಲ್ಲಿ ನಾವು ಸಚಿವರು ಹೇಳಿದ್ದನ್ನು ನಂಬಬೇಕಾಗುತ್ತದೆ. ನಮಗೆ ಏನು ಅನುಮಾನ ಇದೆಯೆಂದರೆ, ಆದರ ಹೇಳಿಕೆಯಲ್ಲಿ ಮಾನ್ವಿ ಆಣೆಕಟ್ಟಿನಿಂದ ಮುಂದಿನ ಮಳೆಗಾಲದಲ್ಲಿ ಏನಕ್ಕೆ ೧೦ ಮಾಗವಾಟ್ ವಿದ್ಯುತ್ ಅನ್ನು ತಯಾರು ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಆಗ ಏನಾದರೂ ಆದರೆ ತುಂಬಾ ಕಷ್ಟ ಆಗಬಹುದು. ಆದುದರಿಂದ ಈ ಬಗ್ಗೆ ಸರಿಯಾದ ಉತ್ತರವನ್ನು ಕೊಡಬೇಕು ಮತ್ತು ಏನಾದರೂ ಲೋಪದೋಷಗಳು ಅಲ್ಲಿ ಇದ್ದರೆ ಅದನ್ನು ಸರಿಪಡಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಸದಸ್ಯರಿಗೆ ಆಣೆಕಟ್ಟಿನ ಕೆಳಭಾಗದಲ್ಲಿ ಬಿರುಕು ಬಿಟ್ಟಿದ್ದು, ಅದರಿಂದ ಅಪಾಯ ಇರಬಹುದೆಂದು ಆತಂಕ ಬಂದಿದೆ. ಅದು ಸರಿಯಲ್ಲ ಎಂದು ನಾನು ಕೇಳಿ ಬಯಸುತ್ತೇನೆ. ಸಾಮಾನ್ಯವಾಗಿ ಕಟ್ಟಡಗಳನ್ನು ಕಟ್ಟಿದಾಗ ಅವನ್ನು ಕ್ಯೂರ್ ಮಾಡುತ್ತಾರೆ. ನೀರು ಅಲ್ಲಿ ನಿಂತು ಕೊಂಡಾಗ ಪ್ರೆಶರ್ ನಿಂದಾಗಿ ಆ ನೀರಿನ ಸ್ವಲ್ಪ ಭಾಗ ಲೀಕ್ ಆಗತಕ್ಕಂಥದ್ದು ಇರುತ್ತದೆ. ಅದು ಆರ್‌ಸಿಸಿ ಮತ್ತು ಕಲ್ಲುಕಟಡಗಳಲ್ಲಿ ಸಹಜವಾಗಿ ಆಗುತ್ತದೆ. ಅಂಥ ಸಿಮೆಂಟ್ ಕಟ್ಟಡದ ಭಾಗಕ್ಕೆ ಹಾಕಿದ ನೀರು ಸ್ವಲ್ಪ ಜಾಸ್ತಿ ಆಗುತ್ತದೆ ಎಂದರೆ ಆಗ ಇನಿಶಿಯಲ್ ಸ್ಟೇಜ್‌ನಲ್ಲಿ ಹೊಸದಾಗಿ ನೀರು ತುಂಬಿರುವುದಾಗಿ ಪ್ರಮಾಣಕ್ಕಿಂತ ಹೆಚ್ಚಿಗೆ ಇದ್ದದ್ದು ಬರುತ್ತಾ ಬರುತ್ತಾ ಆಣೆಕಟ್ಟಿನ ಮೇಲ್ಭಾದಲ್ಲಿನ ನೀರು ಮತ್ತು ಮಣ್ಣಿನ ಕಣಗಳು ಕುಳಿತುಕೊಂಡು ಆಮೇಲೆ ಆಟೋಮೆಟಿಕ್ ಆಗಿ ಸೋರುವಿಕೆಯು ಕಡಿಮೆಯಾಗುತ್ತಾ ಬರುತ್ತದೆ. ಆ ದೃಷ್ಟಿಯಿಂದ ಮಾನ್ಯ ಸದಸ್ಯರಿಗೆ ಕುತೂಹಲ ಬೇಕಾಗಿಲ್ಲ. ಅವರು ಹೇಳಿದ ರೀತಿಯಲ್ಲಿ ಈಗಾಗಲೇ ನಾನು ಎರಡು ಸಲ ಆಣೆಕಟ್ಟಿಗೆ ಭೇಟಿ ಕೊಟ್ಟಿದ್ದೇನೆ. ಮತ್ತೆ ಹೋಗಿ ನೋಡಿ ಆಮೇಲೆ ವಿವರವಾದ ಹೇಳಿಕೆ ಕೊಡುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ.—ಅಧ್ಯಕ್ಷರೇ, ಈ ಬಗ್ಗೆ ನಾನೂ ಮತ್ತು ಸ್ವಾಮಿರಾವ್ ಕೂಡ ಪ್ರಶ್ನೆ ಕೇಳಿರುವುದರಿಂದ ಉಪಪ್ರಶ್ನೆ ಕೇಳಲು ಅವಕಾಶ ಕೊಡಬೇಕು ಅಧ್ಯಕ್ಷರೇ. ಇಂಥ ಗಂಭೀರ ಸಮಸ್ಯೆಯನ್ನು ತಾವು ಆಳವಾಗಿ ಯೋಚನೆ ಮಾಡಬೇಕು. ಯಾರೋ ಅಧಿಕಾರಿಗಳು ಹೇಳಿಬಿಟ್ಟರು ಗ್ರಾಟಿಂಗ್ ಆಗುತ್ತಿದೆ ಎಂದು, ಅದನ್ನು ಇವರು ನಂಬಿಬಿಟ್ಟರು. ಅಲ್ಲಿ ಏನಾಗುತ್ತಿದೆ ಎಂದರೆ ನೀರನ್ನು ಅಬ್‌ಸಾರ್ಬಿಂಗ್ ಮಾಡುವ ಪ್ರಮಾಣಕ್ಕಿಂತ ಜಾಸ್ತಿ ನೀರನ್ನು ಅಬ್‌ಸಾರ್ಬಿಂಗ್ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಒಂದಲ್ಲ ಒಂದು ದಿನ ಅಣೆಕಟ್ಟು ಒಡೆದುಹೋಗುವ ಸಂಭವ ಇದೆ. ಆದ್ದರಿಂದ ತಾವು ತನಿಖಾತಂಡವನ್ನು ಕಳಿಸಿ ಅಲ್ಲಿನ ಸನ್ನಿವೇಶ ಹೇಗಿದೆ, ಎಷ್ಟು ನೀರು ಕಟ್ಟಿದ್ದಾರೆ ಎಂಬುದೆಲ್ಲ ನೋಡಿಸಿ. ಅದು ಬಿಟ್ಟು ಅಧಿಕಾರಿಗಳು ಕೊಟ್ಟು ವರದಿಯನ್ನು ಇಲ್ಲಿ ನಮ್ಮ ಮುಂದಿಡುತ್ತಿದ್ದಾರೆ. ಅಧಿಕಾರಿಗಳ ಮಾತನ್ನು ಮಂತ್ರಿಗಳು ನಂಬಬಾರದು, ಅದನ್ನು ಇಲ್ಲಿ ನಿಜವೆಂದು ಹೇಳಬಾರದು, ಇಂತಹ ವಿಚಾರ ಬಂದಾಗ ತನಿಖಾತಂಡವನ್ನು ಕಳಿಸಿ ಅದರಿಂದ ರಿಪೋರ್ಟ್ ತರಿಸಿ ಆಮೇಲೆ ಉತ್ತರ ಕೊಡಬೇಕು. ಇಲ್ಲದಿದ್ದರೆ ಈ ಅಣೆಕಟ್ಟೆ ೫ ವರ್ಷದಲ್ಲಿ ಒಡೆದು ಹೋಗಿ ಕೋಟ್ಯಾಂತರ ರೂಪಾಯಿಗಳು ನಷ್ಟವಾಗುತ್ತದೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಆಧ್ಯಕ್ಷರೇ, ಮಾನ್ಯ ಸದಸ್ಯರ ಕಳವಳ ನಿಜವಾಗಿಯೂ ಅರ್ಥ ಮಾಡಿಕೊಳ್ಳತಕ್ಕಂಥಾದ್ದು. ಅವರು ತಿಳಿದುಕೊಂಡಿರುವ ಮಟ್ಟಿಗೆ ನೀರು ಎಷ್ಟು ನಿಂತುಕೊಳ್ಳಬೇಕೋ ಅದಕ್ಕಿಂತ ಹೆಚ್ಚು ನೀರು ಬಿಡುವುದು ಸಾಮಾನ್ಯ. ಆದರೂ ನಾನು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳನ್ನು ಈ ಬಗ್ಗೆ ಕರೆಸಿ ಚರ್ಚೆ ಮಾಡಿದ್ದೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಅಧಿಕಾರಿಗಳು ನಿಮಗೆ ಸರಿಯಾದ ಉತ್ತರ ಕೊಡುವುದಿಲ್ಲ, ಇದೊಂದು ರಾಜ್ಯಯೋಜನೆ ಬಹಳ ಹಗುರವಾಗಿ ಮಾತಾಡುವುದು ಸರಿಯಲ್ಲ. ಸತ್ಯಾಂಶ ಹೊರ ಬರಲಿ, ತನಿಖಾ ತಂಡ ರಚನೆ ಮಾಡಿ, ನಾವು ಹೇಳುತ್ತಿರುವುದು ಸತ್ಯವೋ ಸುಳ್ಳೋ ಪರಾಂಬರಿಸಿ ಆಮೇಲೆ ಉತ್ತರ ಕೊಡಬೇಕು.

ಶ್ರೀ ಡಿ. ಜಿ. ಬಸವನಗೌಡ.—ಶಿವಮೊಗ್ಗ ಜಿಲ್ಲೆಯ ಎಲ್ಲ ಶಾಸಕರನ್ನು ಕರೆಸಿ ಮಾತನಾಡಿ, ಬೇಕಾದರೆ ಮಂತ್ರಿಗಳು ಅಲ್ಲಿಗೆ ಭೇಟಿ ಕೊಡುವಾಗ ನಮಗೆಲ್ಲಾ ಆಹ್ವಾನ ನೀಡಲಿ, ನಾವು ಹೋಗುತ್ತೇವೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ನಾನು ಈಗಾಗಲೇ ಒಂದು ತಂಡ ಕರೆದುಕೊಂಡು ಹೋಗಿ ತೋರಿಸಿ ಕೊಂಡು ಬಂದಿದ್ದೇನೆ ಆಗ ನೀರು ನಿಂತಿರಲಿಲ್ಲ. ಇನ್ನೊಮ್ಮೆ ಕರೆದುಕೊಂಡು ಹೋಗುವಲ್ಲಿ ನನ್ನ ಅಭ್ಯಂತರವಿಲ್ಲ.

(ಗದ್ದಲ)

ಅಧ್ಯಕ್ಷರು.—ಮೊದಲು ಅವರು ಹೇಳುವುದನ್ನು ಕೇಳಿ. ಆಮೇಲೆ ಪ್ರಶ್ನೆ ಕೇಳಿ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಈಗಾಗಲೇ ಎಲ್ಲಿಂದ ಅಧಿಕಾರಿಗಳನ್ನು ಕರೆಸಿ ಕೂಲಂಕುಷವಾಗಿ ಚರ್ಚೆ ಮಾಡಿದ್ದೇನೆ. ನಿಮ್ಮೆಲ್ಲರ ಅಭಿಪ್ರಾಯದಂತೆ ಖಂಡಿತ ಈ ಮನೆಯ ಕಲಸ ಮುಗಿದ ಮೇಲೆ ನಾನೇ ಹೋಗಿ ನೋಡುತ್ತೇನೆ. ಇದನ್ನು ತಾಂತ್ರಿಕವಾಗಿ ವಿಚಾರಮಾಡಿ ನೀರು ಹೆಚ್ಚಿಗೆ ಏಕೆ ಹೋಯಿತು. ಅದಕ್ಕೆ ಏನು ಕಾರಣ ಎಂದು ತಿಳಿದು ಪರಿಪಡಿಸುತ್ತೇನೆ, ಮತ್ತು ಅದಕ್ಕೆ ಜವಾಬ್ದಾರರನ್ನು ಕಾನೂನು ಕ್ರಮಕ್ಕೊಳಪಡಿಸುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಈಗಾಗಲೇ ನೂರಾರು ಕೋಟಿ ರೂ.ಗಳನ್ನು ವೆಚ್ಚಮಾಡಿ ಅನೇಕ ರೈತರನ್ನು ಸ್ಥಳಾಂತರಿಸಿ ಅವರ ಭೂಮಿ ಮನೆಗಳನ್ನು ನೀರಿನಲ್ಲಿ ನಿಲ್ಲಿಸಿಬಿಟ್ಟಿದ್ದಾರೆ. ಈಗ ಡ್ಯಾಮ್ ಒಡೆಯುವ ಮಟ್ಟಕ್ಕೆ ಬಂದಿರಲಾಗಿ ಹತ್ತು ಕಡೆ ನೀರು ಸೋರುವಿಕೆಯನ್ನು ಕಡಿಮೆ ಮಾಡಿದ್ದಾರೆ. ಅಲ್ಲಿನ ಜನರು ನಮಗೆ ನಿಮ್ಮ ವಿದ್ಯುತ್ ಬೇಡ್ರಪ್ಪ ಎಂದು ಹೇಳಿದರೂ ಕೇಳದೆ ಇಂಥಾ ಡ್ಯಾಮ್ ಕಟ್ಟಿದ್ದಾರೆ. ಅಲ್ಲಿಗೆ ಡ್ಯಾಮ್ ನಿರ್ಮಾಣಕ್ಕಿಂದ ಬಂದಿರುವ ಕಬ್ಬಿಣ ಸಿಮೆಂಟ್ ದೇಶದಲ್ಲಿರುವ ಎಲ್ಲ ಇಂಜಿನಿಯರ್‌ಗಳ ಮನೆ ಕಟ್ಟಲು ಬಳಕೆಯಾಯ್ತು.....ಅಣೆಕಟ್ಟು ಕಟ್ಟುವಾಗ ಸಿಮೆಂಟ್ ಗಾರೆ ಹಾಕದೆ ಮಣ್ಣು ಹಾಕಿದ್ದಾರೆ. ಅಲ್ಲಿಗೆ ಬಂದಸಿಮೆಂಟನ್ನು ಉಪಯೋಸಲಿಲ್ಲ. ಮಾನ್ಯ ಮಂತ್ರಿಗಳಿಗೆ

೧೦–೩೦ ಪಿ. ಎಂ.

ಇದೆಲ್ಲಾ ಗೊತ್ತಿದೆಯೋ ಗೊತ್ತಿಲ್ಲವೋ ತಿಳಿಯದು. ಇದಕ್ಕೆ ಸಂಬಂಧಪಟ್ಟಿರತಕ್ಕಂತಹ ಚಕ್ರಾ ಯೋಜನೆಯಲ್ಲಿ ಡ್ಯಾಂ ಅನ್ನು ಕಟ್ಟಿದ್ದಾರೆ. ಅಲ್ಲಿಕೂಡ ಒಂದು ಆಡಿ ಬಿರುಕು ಬಿಟ್ಟಿದೆ. ಅಲ್ಲಿಗೆ ಸಾರ್ವಜನಿಕರನ್ನು ನೋಡಲು ಬಿಡುತ್ತಿಲ್ಲ, ಶಾಸಕರು ಹೋದರೂ ಕೂಡ ಬಿಡುವುದಿಲ್ಲ. ನಾನೂ ಕೂಡ ನೋಡಲು ಹೋದಾಗ ಬಿಡದೆ ವಾಪಸ್ ಬಂದಿದ್ದೇನೆ. ಇದು ದೊಡ್ಡ ಸ್ಕ್ಯಾಂಡಲ್ ಆಗಿದೆ. ವಿದ್ಯುತ್ತನ್ನು ಉತ್ಪಾದನೆ ಮಾಡುತ್ತೇವೆಂದು ಹೇಳಿದಿರಿ, ಅಲ್ಲಿ ವಿದ್ಯುಚ್ಛಕ್ತಿಯನ್ನೂ ಕೂಡ ಉತ್ಪಾದನೆ ಮಾಡಲಿಲ್ಲ. ನೀರನ್ನು ಏಕೆ ಇಳಿಸಿದ್ದಾರೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಅಲ್ಲಿ ಸ್ವಲ್ಪ ನೀರು ಹೋಗುತ್ತಿತ್ತು ಸರಕಾರ ಗಮನಹರಿಸಿ ಎಕ್ಸ್‌ಪರ್ಟ್ಸ್ ಅನ್ನು ಆ ಡ್ಯಾಮಿಗೆ ಕಳಿಸಿ ಅಲ್ಲಿ ಏನಾದರೂ ಅಪಾಯ ಇದೆಯೇ ಎಂದು ಈಗಾಗಲೇ ಕೂಲಂಕುಷವಾಗಿ ತನಿಖೆ ಮಾಡಿಸಿದ್ದೇವೆ. ಅವರ ಅಭಿಪ್ರಾಯದ ಪ್ರಕಾರ ಆ ಡ್ಯಾಮಿಗೆ ಯಾವುದೇ ರೀತಿಯ ಅಪಾಯವಿಲ್ಲ. ಅಲ್ಲಿ ಹತ್ತು ಆಡಿ ನೀರು ಕಡಿಮೆಯಾಗಿದೆ. ಆದು ತುಂಬಬೇಕು. ಆದನ್ನು ನಾವು ಕಡಿಮೆ ಮಾಡತಕ್ಕಂತಹ ಪ್ರಶ್ನೆ ಬರುವುದಿಲ್ಲ ಮುಳಿಗಾಲದಲ್ಲಿ ಇದು ತುಂಬಬಹುದು. ರಿಸರ್ವಾಯರ್‌ನಲ್ಲಿ ಎಲ್ಲ ವ್ಯವಸ್ಥೆಯನ್ನು ಮಾಡಲಾಗಿದೆ.

ಶ್ರೀ ಪಟಮಕ್ಕಿ ರತ್ನಾಕರ್.—ಇದು ಉತ್ತರ ಅಲ್ಲ.

ಶ್ರೀ ಲಕ್ಷ್ಮೀನರಸಿಂಹಯ್ಯ.—ನನಗೆ ಗಂಟಲಿನ ತೊಂದರೆ ಇದೆ, ಆದರೂ ಗಂಟಲು ಸರಿ ಮಾಡಿ ಕೊಂಡು ಉತ್ತರ ಹೇಳುತ್ತಿದ್ದೇನೆ. ವೊಲ್ಟೇಜ್ ನನಗೆ ಕಡಿಮೆಯಾಗಿದೆ. ಈಗ ಲಕ್ಕಪ್ಪನವರ ಹಸ್ತಿರ ಮಾತನಾಡಿ ಇನ್ನೂ ಕಡಿಮೆಯಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳಿಗೆ ವೊಲ್ಟೇಜ್ ಕಡಿಮೆ ಯಾಗಿದೆ ಎಂದು ಹೇಳುತ್ತಿದ್ದಾರೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಆ ಡ್ಯಾಂ ಬಗ್ಗೆ ಆತಂಕ ಪಡಬೇಕಾಗಿಲ್ಲ ಅಂತಹ ಪರಿಸ್ಥಿತಿ ಇಲ್ಲ. ನಿಮ್ಮ ಮಸ್ಸಿಗೆ ನೆಮ್ಮದಿ ತಂದು ಕೊಡಲಿಕ್ಕೆ ಈ ವಿಧಿವಿಶನ ಮುಗಿದ ತಕ್ಷಣ ಸ್ಥಳೀಯ ಶಾಸಕರ ತಂಡವನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ. ಇದು ಸಾರ್ವಜನಿಕರ ಹಿತದೃಷ್ಟಿಯಿಂದ ಮಾಡಿರತಕ್ಕಂತಹ ಡ್ಯಾಂ. ಇದನ್ನು ತಾವು ಹಸ್ತಿರದಿಂದ ನೋಡಬೇಕಾದುದು ಅವಶ್ಯ ಇದೆ.

ಶ್ರೀ ಪಟಮಕ್ಕಿ ರತ್ನಾಕರ್.—ಅಲ್ಲಿಗೆ ತನಿಖಾ ತಂಡವನ್ನು ಕಳಿಸುತ್ತೀರಾ

ಬಣ್ಣದ ಗ್ರಾನೈಟ್ ಕಲ್ಲಿನ ಅಕ್ರಮ ವ್ಯವಹಾರದ ಬಗ್ಗೆ

೧೫೫(ಟಿ೫೫) ಶ್ರೀ ಯು. ಭೂಪತಿ.(ಸಂಡೂರು) —ಮಾನ್ಯ ಕಣ್ಣು ಪ್ರಮಾಣದ ಉದ್ಯಮ ಗಳು ಹಾಗೂ ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಬಣ್ಣದ ಗ್ರಾನೈಟ್(ಕಲ್ಲನ್ನು) ಅಕ್ರಮವಾಗಿ ಹಲವಾರು ಜನ ರಫ್ತು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಗ್ರಾನೈಟ್ ಕಲ್ಲಿನ ಅಕ್ರಮ ವ್ಯವಹಾರವನ್ನು ತಡೆಯಲು ಸರ್ಕಾರದ ಯೋಜನೆಯೇನು ?

ಇ) ಅಕ್ರಮ ವ್ಯವಹಾರಗಳಲ್ಲಿ ತೊಡಗಿದವರ ವಿರುದ್ಧ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ?

ಶ್ರೀ ರಮೇಶ್ ಸಿ. ಜಿಗಜಿಣಗಿ(ಕಣ್ಣು ಪ್ರಮಾಣದ ಕೈಗಾರಿಕೆ ಹಾಗೂ ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ಬಂದಿದೆ.

ಆ) ಸರ್ಕಾರದ ಜಮೀನುಗಳಲ್ಲಿ ಅಕ್ರಮವಾಗಿ ನಡೆದಿರುವ ಗ್ರಾನೈಟ್ ಬ್ಲಾಕ್‌ಗಳನ್ನು ಜಪ್ತಿ ಮಾಡಲಾಗಿದೆ ಮತ್ತು ಸರ್ಕಾರಿ ಸಂಸ್ಥೆಯ ಸಂಸ್ಥೆಗೆ ಅವುಗಳನ್ನು ವಿಲೇವಾರಿ ಮಾಡಲಾಗಿದೆ.